# ಫುಸ್ಕೋಸ್ ಶಾಲೆ

ಇಂದಿರನಗರ ಬೆಂಗಳೂರು

ವಾರ್ಷಿಕ ಪರೀಕ್ಷೆ– ೨೦೧೬

ವಿಷಯ : ಕನ್ನಡ ದ್ವಿತೀಯ ಭಾಷೆ

ಅಂಕಗಳು–80

ತರಗತಿ : VII ಅವಧಿ : 2hours

**I. ಅರ್ಥ ಬರೆಯಿರಿ.** **5**

೧. ಅಶ್ವ = ೨. ಕ್ರೀಡೆ = ೩. ಅಂತರ = ೪. ಕೊನರಿತು = ೫. ರಮಣೀಯ =
೬. ಪ್ರಾಮುಖ್ಯತೆ = ೭. ನಿಯಂತ್ರಣ = ೮. ಸೂತ್ರಧಾರ = ೯. ಸದ್ಭಾವನೆ = ೧೦. ಚಿತ್ತ =

**II. ಬಿಟ್ಟಿರುವ ಸ್ಥಳಗಳನ್ನು ಪೂರ್ತಿಗೊಳಿಸಿರಿ.** **2½**

೧. ಅಶ್ವದಳಕ್ಕೆ ಸಂಬಂಧಿಸಿದ ಪ್ರಧಾನ ಕಾರ್ಯಾಲಯವು _____ ನಲ್ಲಿದೆ.
೨. ಒಲಂಪಿಕ್ ಕ್ರೀಡಾಕೂಟಗಳು ______ ವರ್ಷಗಳಿಗೊಮ್ಮೆ ನಡೆಯುತ್ತವೆ.
೩. ಒಬ್ಬ ರಾಜನು ಕುದುರೆಯನ್ನೇರಿ ______ ಹೊರಟಿದ್ದನು.
೪. ಕುಲುವಿನಲ್ಲಿ _____ ದೇವರ ಒಂದು ಗುಡಿಯಿದೆ.
೫. ಬಿಜಾಪುರವು ಮೊದಲು _____ ರಾಜರ ವಶದಲ್ಲಿತ್ತು.

**III. ಪದ್ಯವನ್ನು ಪೂರ್ತಿಗೊಳಿಸಿರಿ.** **6**

೧. ನವ ಯುಗಾದಿ ___________
____________________
____________________
______ ತನುವನು ಚೆಲ್ಲಿತು ॥

೨. ಹತ್ತು ವರ್ಷಕ್ಕೊಮ್ಮೆ ನನ್ನ ______

___________________
___________________
___ ನಾನೆ ಜನಗಣತಿದಾರ ॥

**IV. ಹೊಂದಿಸಿ ಬರೆಯಿರಿ.** **2½**

| | |
|---|---|
| ೧. ವಿದೇಶಿ | ಚಾಲುಕ್ಯರು |
| ೨. ಒಲಂಪಿಯಾ | ಗಣ್ಯರು |
| ೩. ಸತ್ಯವಾದ | ಪುರಾಣಗಳು |
| ೪. ಬಾದಾಮಿಯ | ಮಾತುಗಳು |
| ೫. ಸಕಲಶಾಸ್ತ್ರ | ಒಂದು ನಗರ |

**V. ಸ್ವಂತ ವಾಕ್ಯದಲ್ಲಿ ಬರೆಯಿರಿ.** **7**

೧. ತರಬೇತಿ – ೨. ಮಾರಾಟ – ೩. ಉತ್ಸವ – ೪. ಸಮವಸ್ತ್ರ – ೫. ಸಜ್ಜನರು – ೬. ರಕ್ಷಣೆ – ೭. ಪಂಜರ –

**VI. ವಿರುದ್ಧಾರ್ಥಕ ಪದ ಬರೆಯಿರಿ.** **3**

೧. ಮಂಗಳ ೨. ಪ್ರಾರಂಭ ೩. ವಿಶ್ವಾಸ ೪. ಅನುಭವ ೫. ಸದ್ಭಾವನೆ ೬. ಧೈರ್ಯ

**VII. ವಚನ ಬದಲಾಯಿಸಿರಿ.** **4**

೧. ಮನುಷ್ಯ – ೨. ಅವರು – ೩. ವಾದ್ಯ – ೪. ಸೈನಿಕ – ೫. ಕೃತಜ್ಞತೆ – ೬. ರಾಜ್ಯ – ೭. ನೀನು – ೮. ನಾಯಕ –

**VIII. ಮಾದರಿಯಂತೆ ಬರೆಯಿರಿ.** **3**

ಮಾದರಿ; ಸಂಚರಿಸುವನು – ಸಂಚರಿಸುತ್ತಾನೆ.

೧. ಬೇಡುವನು – ೨. ಹೋಗುವನು – ೩. ಹೇಳುವನು – ೪. ಬರೆಯುವನು – ೫. ಪಳಗುವನು – ೬. ಎಣಿಸುವನು –

**IX. ಮಾದರಿಯಂತೆ ಬದಲಾಯಿಸಿರಿ ಬರೆಯಿರಿ.** **2**

ಮಾದರಿ; ಕಮಲ ಕಥೆ ಓದಿದಳು. ಕಮಲ ಕಥೆ ಓದಬಹುದು.

೧. ರಾಮನು ಒಂದು ಪುಸ್ತಕ ಕೊಂಡನು.

೨. ಸುಮಾ ಗಿಡಗಳನ್ನು ನೆಟ್ಟಳು.

೩. ಆ ಹುಡುಗ ಆಟ ಆಡಿದರು.

೪. ಈಗ ಮಳೆ ಬಂದಿದೆ.

X. **ಪ್ಯಾಸೇಜ್**

ನಾಡು– ನುಡಿಯ ಹಿತಕ್ಕಾಗಿ ದುಡಿದು ಅಮರರಾದ ಅನೇಕರಲ್ಲಿ ಆಲೂರು ವೆಂಕಟರಾಯರು ಅಗ್ರಗಣ್ಯರು. ಇವರು ಕನ್ನಡ ಕುಲಪುರೋಹಿತರೆಂದೇ ಹೆಸರಾಗಿದ್ದವರು. ಇವರ ಕನ್ನಡ ಪ್ರೇಮ ನಮಗೆ ಆದರ್ಶ. ನಾನು ಕನ್ನಡಿಗ ಕರ್ನಾಟಕ ನಮ್ಮದು ಎಂಬ ಪ್ರಜ್ಞೆಯನ್ನು ಕನ್ನಡಿಗರಲ್ಲಿ ಮೂಡಿಸಿ ಬೆಳೆಸಿದ ಧೀಮಂತ ಕನ್ನಡಿಗರು ಇವರು.

ಈ ಮಹನೀಯರು 12-7-1880ರಲ್ಲಿ ಬಿಜಾಪುರದಲ್ಲಿ ಜನಿಸಿದರು. ಇವರ ತಂದೆ ಭೀಮರಾಯರು. ತಾಯಿ ಭಾಗೀರಥಿಬಾಯಿ. ಇವರ ಸ್ವಂತ ಸ್ಥಳ ಧಾರವಾಡ ಜಿಲ್ಲೆಯ ರೋಣ ತಾಲೂಕಿನ ಆಲೂರು ಗ್ರಾಮ. ಪ್ರೌಢ ಶಿಕ್ಷಣದ ನಂತರ ಉನ್ನತ ವ್ಯಾಸಂಗಕ್ಕಾಗಿ ಪುಣೆಗೆ ಹೋದರು. ಅಲ್ಲಿಯ ಫರ್ಗ್ಯುಸನ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿಎ ಪದವಿ ಪಡೆದು ವಕೀಲ ವೃತ್ತಿ ಆರಂಭಿಸಿದರು. ಆ ಕಾಲಕ್ಕೆ ಭಾರತದ ಸ್ವಾತಂತ್ರ್ಯ ಚಳುವಳಿಯ ಪ್ರಭಾವ ಇವರ ಮೇಲೆ ಉಂಟಾಗಿ ಅನೇಕ ರಾಷ್ಟ್ರನಾಯಕರ ಸಂಪರ್ಕ ಬೆಳೆಯಿತು.

**ಪ್ರಶ್ನೆಗಳು;** **5**

೧. ಕನ್ನಡ ಪುರೋಹಿತರು ಎಂದು ಹೆಸರಾಗಿದ್ದವರು ಯಾರು ?

೨. ಆಲೂರು ವೆಂಕಟರಾಯರು ಎಲ್ಲಿ, ಯಾವಾಗ ಜನಿಸಿದರು ?

೩. ವೆಂಕಟರಾಯರು ಬಿಎ ಪದವಿಯನ್ನು ಎಲ್ಲಿ ಪಡೆದರು ?

೪. ವೆಂಕಟರಾಯರು ಪ್ರೌಢ ಶಿಕ್ಷಣದ ನಂತರ ತಮ್ಮ ವಿದ್ಯಾಭ್ಯಾಸವನ್ನು ಎಲ್ಲಿ ಮುಂದುವರಿಸಿದರು ?

೫. ಇವರ ಮೇಲೆ ರಾಷ್ಟ್ರನಾಯಕರ ಸಂಪರ್ಕ ಹೇಗೆ ಬೆಳೆಯಿತು ?

## ವಿಭಾಗ – ಬಿ

**XI. ಒಂದು ವಾಕ್ಯದಲ್ಲಿ ಉತ್ತರಿಸಿರಿ.** **12**

೧. ಅಕ್ಬರ್ ಚಕ್ರವರ್ತಿಯು ಯಾವ ಪ್ರಶ್ನೆಯನ್ನು ಕೇಳಿದನು ?
೨. ಕೋಗಿಲೆ ಏನೆಂದು ಕೂಗಿತು ?
೩. ಅಶ್ವದಳ ಯಾವ ಇಲಾಖೆಯಲ್ಲಿದೆ ?
೪. ಪ್ರಾಚೀನ ಒಲಂಪಿಯಾ ನಗರ ಯಾವುದಕ್ಕೆ ಪ್ರಸಿದ್ಧಿ ಪಡೆದಿತ್ತು ?
೫. ನಾಲ್ಕು ದಿನಗಳ ನಂತರ ರಾಜನ ಅರಮನೆಗೆ ಯಾರು ಬಂದರು ?
೬. ನವ ಯುಗಾದಿ ಏನು ತಂದಿತ್ತು ?
೭. ಕುಲುವಿನಲ್ಲಿ ಪೂಜೆ – ಉತ್ಸವಗಳು ಯಾವ ದೇವರ ಹೆಸರಿನಲ್ಲಿ ನಡೆಯುತ್ತದೆ ?
೮. ಬಿಜಾಪುರವು ಎಂತಹ ನಗರವಾಗಿ ಬೆಳೆದು ಬಂದಿದೆ ?
೯. ಪಂಡಿತನು ಪಕ್ಕದ ಊರಿಗೆ ಹೇಗೆ ಹೋಗಬೇಕಾಗಿತ್ತು ?
೧೦. ಜನಗಣತಿದಾರ ಯಾರ ತಲೆಯನ್ನು ಎಣಿಸುತ್ತಾನೆ ?
೧೧. ಜೀವನ ಧರ್ಮ ಯಾವುದು ?
೧೨. ಚಿತ್ತವಿಲ್ಲದೆ ಯಾವುದನ್ನು ಸುತ್ತಬಾರದು ?

**XII. ಈ ಮಾತನ್ನು ಯಾರು ಯಾರಿಗೆ ಹೇಳಿದರು ?** **6**

೧. "ಹಾಗಾದರೆ ಇವುಗಳನ್ನು ನಾನೇ ಕೊಳ್ಳುತ್ತಾನೆ".
೨. "ಅದನ್ನೆಲ್ಲಾ ಓದಿದರೆ ಹೊಟ್ಟೆ ತುಂಬುವುದೆ ಸ್ವಾಮಿ".
೩. "ನೀವು ಇಲ್ಲಿ ತಂಗುವುದು ನಮ್ಮ ಭಾಗ್ಯವಲ್ಲವೆ ಒಡೆಯ".
೪. "ಈಗ ಈಜು ಕಲಿಯದ ನೀವೇ ಮೂರ್ಖರಾದಿರಿ".

**XIII. 2/3 ವಾಕ್ಯದಲ್ಲಿ ಉತ್ತರಿಸಿರಿ.** **12**

೧. ಅಶ್ವದಳದ ಪ್ರಧಾನ ಕಾರ್ಯಾಲಯವು ಎಲ್ಲಿದೆ ? ಯಾರ ನಿಯಂತ್ರಣದಲ್ಲಿದೆ ?
೨. ಒಲಂಪಿಕ್ ಕ್ರೀಡಾ ಸ್ಪರ್ಧೆಗಳನ್ನು ಎಲ್ಲಿ ಏರ್ಪಡಿಸುತ್ತಾರೆ ?
೩. ರಾಜನು ಗಿಣಿಗಳನ್ನು ತೆಗೆದುಕೊಂಡ ನಂತರ ಬೇಟೆಗಾರನಿಗೆ ಏನು ಹೇಳಿದನು ?
೪. ವಿಜಯ ದಶಮಿಯ ದಿನ ವ್ಯಾಸ ನದಿಯ ಬಳಿ ಏನು ನಡೆಯುತ್ತದೆ ?
೫. ಚಾಲುಕ್ಯ ರಾಜರ ಕಾಲದಲ್ಲಿ ಕಟ್ಟಿದ ದೇವಾಲಯಗಳು ಹೇಗಿವೆ ?
೬. ಪಂಡಿತನು ಎಲ್ಲರ ಮುಂದೆ ತನ್ನ ಬಗ್ಗೆ ಏನೆಂದು ಹೇಳಿಕೊಳ್ಳುತ್ತಿದ್ದನು ?

**XIV. ಪತ್ರಲೇಖನ ( ಬೇಕಾದ ಒಂದಕ್ಕೆ ಮಾತ್ರ)** **5**

೧. ನೀವು ಕೈಗೊಂಡ ಪ್ರವಾಸದ ಕುರಿತು ನಿಮ್ಮ ಗೆಳೆಯ/ ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.
೨. ನಿಮ್ಮ ಶಾಲೆಯಲ್ಲಿ ನಡೆದ ವಾರ್ಷಿಕೋತ್ಸವದ ಕುರಿತು ನಿಮ್ಮ ಗೆಳೆಯ/ ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.

**XV. ಪ್ರಬಂಧ (ಬೇಕಾದ ಒಂದಕ್ಕೆ ಮಾತ್ರ)** **5**

೧. ದೂರದರ್ಶನ        ೨. ಕೈ ಕೆಸರಾದರೆ ಬಾಯಿ ಮೊಸರು